**ಮಹಾನಗರ 2ನೇ ಅಪರ ಮುಖ್ಯ ದಂಡಾಧಿಕಾರಿಯವರ ನ್ಯಾಯಾಲಯ**
**ಬೆಂಗಳೂರು**

**ದಿನಾಂಕ 16ನೇ ಮಾರ್ಚ 2014**

**ಸಿ. ಸಿ. ನಂ.11476-2014**

**ಉಪಸ್ಥಿತರು ಃ ಶ್ರೀ ಎಂ. ಸಿ. ನಾಡಗೌಡ ಎಂ.ಕಾಂ. ಎಲ್ಎಲ್ಬಿ(ಸ್ಪೆ)**
**ಮ. ನ. 2ನೇ ಅಪರ ಮು. ದಂಡಾಧಿಕಾರಿಗಳು.**

***ದಂಡ ಪ್ರಕ್ರಿಯಾ ಸಂಹಿತೆ ಕಲಂ 355ರ ಅಡಿ ತೀರ್ಪು***

**ಪಿರ್ಯಾಧಿದಾರರು** ಃ ರಾಜ್ಯ ಸರ್ಕಾರದ ಪರವಾಗಿ
ಬಸವನಗುಡಿ ಮಹಿಳಾ ಆರಕ್ಷಕ ಠಾಣೆಯ
ಪೊಲೀಸರು, ಬೆಂಗಳೂರು.

**ಆರೋಪಿಯರ ಹೆಸರು ಮತ್ತು**
**ವಿಳಾಸ** ಃ ಎ1) ಹರಿಪ್ರಸಾದ್ ತಂದೆ ಹನುಮಂತರಾಯುಡು
44 ವರ್ಷ ಸದಸ್ಯಕ್ಕೆ ಕೆಲಸ ಇಲ್ಲ ನಾಗರಭಾವಿ
ಎ2) ವಿಜಯಲಕ್ಷ್ಮಿ ಕೋಂ ಹನುಮಂತರಾಯುಡು
66 ವರ್ಷ ಗೃಹಿಣಿ ನಾಗರಬಾವಿ 9ನೇ
ಬ್ಲಾಕ್, ಬೆಂಗಳೂರು.

**ಅಪರಾಧ ಎಸಗಿದ ದಿನಾಂಕ ಃ** **16-07-2013**

**ಪ್ರಥಮ ವರ್ತಮಾನ ವರದಿ**
**ಸಲ್ಲಿಸಿದ ದಿನಾಂಕ ಃ** **116.07.2013**

**ಅಪರಾಧ** ಃ ಭಾ.ದಂ.ಸಂ. ಕಲಂ 498ಎ 420 506
ಸಹವಾಚಕ ಕಲಂ 34.

**ಆಪಾದನೆ** ಃ ಆರೋಪಿಗಳು ತಪ್ಪು ಒಪ್ಪಿಕೊಂಡಿಲ್ಲ

**ಅಂತಿಮ ಆದೇಶ** ಃ ಆರೋಪಿಯರನ್ನು ಆಪಾದನೆಗಳಿಂದ
ನಿರ್ದೋಷಿಗಳೆಂದು ಬಿಡುಗಡೆ ಮಾಡಿದೆ.

## ಕಾರಣಗಳ ಸಂಕ್ಷಿಪ್ತ ವಿವರಣೆ

ಬವನಗುಡಿ ಮಹಿಳಾ ಆರಕ್ಷಕ ಠಾಣೆಯ ಆರಕ್ಷಕ ಉಪ-ನಿರೀಕ್ಷಕರು ಆರೋಪಿಯರ ವಿರುದ್ಧ ಭಾರತ ದಂಡ ಸಂಹಿತೆ ಕಲಂ 498ಎ, 420, 506 ಸಹವಾಚಕ ಕಲಂ 34 ರ ಶಿಕ್ಷಾರ್ಹ ಅಪರಾಧ ಗಳಿಗೆ ಕ್ರಮ ತೆಗೆದುಕೊಳ್ಳುವಂತೆ ಕೋರಿ ಮೊಕದ್ದಮೆಯನ್ನು ದಾಖಲು ಮಾಡಿದ್ದಾರೆ.

**2. ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇದೆ.**

ದಿನಾಂಕ 14.06.2012ರಂದು ಫಿರ್ಯಾದುದಾರರು 1ನೇ ಅರೋಪಿಯನ್ನು ಚನ್ನಪಟ್ಟಣದ ನರಸಿಂಹಸ್ವಾಮಿ ಕಲ್ಯಾಣ ಮಂಟಪದಲ್ಲಿ ವಿವಾಹವಾಗಿದ್ದು, ವಿವಾಹಕ್ಕೆ ಮೊದಲು 1ನೇ ಅರೋಪಿಯು ಕೆನಡಾದಲ್ಲಿ ವಾಸವಿದ್ದು ಅವರು ಮೇಲಿಂದ ಮೇಲೆ ಬೆಂಗಳೂರಿಗೆ ಬರುತ್ತಿದ್ದರೆಂದು ಆ ಸಮಯದಲ್ಲಿ ಫಿರ್ಯಾದುದಾರರನ್ನು ಭೇಟಿಮಾಡಿ ಅವರಿಗೆ ವಿವಾಹ ಮಾಡಿಕೊಳ್ಳುವಂತೆ ಬಲವಂತ ಮಾಡಿ ಆ ನಂತರ ವಿವಾಹವಾಗಿದ್ದಾರೆ. ನಂತರ ಫಿರ್ಯಾದುದಾರರು ಮತ್ತು 1ನೇ ಅರೋಪಿ ಬೆಂಗಳೂರಿನಲ್ಲಿ ವಾಸವಿದ್ದು ಆ ಸಮಯದಲ್ಲಿ ಫಿರ್ಯಾದುದಾರರಲ್ಲಿ ಆರೋಪಿತರು ಒತ್ತಾಯಮಾಡಿ ಕಾರು, ಫ್ರೀಡ್ಜ್, ವಾಷಿಂಗ್ ಮೆಷಿನ್ ಓಪನ್ ಕಾಟ್, ಕಬ್‌ಬೋರ್ಡ್, ಚಿನ್ನದ ಒಡವೆ, ಬೆಳ್ಳಿಯ ಇತರ ವಸ್ತುಗಳನ್ನು ಪಡೆದಿದ್ದು ನಂತರ 1ನೇ ಅರೋಪಿಗೆ ವಿಚ್ಛೇಧನವಾಗಿದ್ದ ವಿಷಯವು ಫಿರ್ಯಾದುದಾರರಿಗೆ ತಿಳಿದುಬಂತೆಂದು ನಂತರ ಆರೋಪಿಯು ಮೊದಲೇ ವಿವಾಹವಾಗಿದ್ದ ವಿಷಯವನ್ನು ಮುಚ್ಚಿಟ್ಟು ಭಿನ್ನವಾಗಿ ವರ್ತಿಸುತ್ತಿದ್ದುದಲ್ಲದೆ ಫಿರ್ಯಾದುದಾರರನ್ನು ಕೆನಡಾಗೆ ಕರೆದುಕೊಂಡು ಹೋಗಲು ವೀಸಾ ಸಿಗಲಿಲ್ಲವೆಂದು ಹೇಳಿ ವಿಸಿಟರ್ ವೀಸಾ ತೆಗೆದುಕೊಂಡು ಕೆನಡಾದಲ್ಲಿ ಎರಡುತಿಂಗಳ ಕಾಲ ಫಿರ್ಯಾದುದಾರರು ವಾಸವಿದ್ದು ಬಂದರೆಂದು ನಂತರ 1ನೇ ಅರೋಪಿಯು ಹತ್ತುಲಕ್ಷ ರೂಪಾಯಿ ವರದಕ್ಷಿಣೆ ತರುವಂತೆ ಫಿರ್ಯಾದುದಾರರನ್ನು ಒತ್ತಾಯಿಸಿ ಪ್ರಾಣ ಬೆದರಿಕೆ ಹಾಕಿದರೆಂದು ಫಿರ್ಯಾದುದಾರರು ನೀಡಿದ ದೂರಿನ ಆಧಾರದಲ್ಲಿ ಪೊಲೀಸರು ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿದ ನಂತರ ತನಿಖೆ ಕೈಗೊಂಡು ಆರೋಪಿಯರ ವಿರುದ್ಧ ಭಾರತ ದಂಡ ಸಂಹಿತೆ ಕಲಂ 498ಎ, 420, 506 ಸಹವಾಚಕ ಕಲಂ 34ರ ಅಪರಾಧಗಳಿಗೆ ದೋಷಾರೋಪಣಾಪಟ್ಟಿಯನ್ನು ಸಲ್ಲಿಸಿದ್ದಾರೆ.

3. ಆರೋಪಿಯರನ್ನು ಪೊಲೀಸರು ನ್ಯಾಯಾಲಯದಲ್ಲಿ ಹಾಜರುಪಡಿಸಿದಾಗ ಅವರಿಗೆ ನ್ಯಾಯಾಲಯ ಜಾಮೀನು ಮುಂಜೂರು ಮಾಡಿದೆ. ನಂತರ ಆರೋಪಿಗಳಿಗೆ ದೋಷಾರೋಪಣಾಪಟ್ಟಿಯ ನಕಲುಗಳನ್ನು ಒದಗಿಸಿದೆ. ಆರೋಪಿಯರ ವಿರುದ್ದ ಭಾರತ ದಂಡ ಸಂಹಿತೆ ಕಲಂ 498ಎ 420 506 ಸಹವಾಚಕ ಕಲಂ 34ರ ಅಪರಾಧಗಳಿಗೆ ದೋಷಾರೋಪಣೆಯನ್ನು ರಚಿಸಿ ಅವರಿಗೆ ಓದಿ ವಿವರಿಸಿ ಹೇಳಿದಾಗ, ಆರೋಪಿಯರು ಯಾವುದೇ ತಪ್ಪು ಮಾಡಿಲ್ಲವೆಂದು ಹೇಳಿ ಪ್ರಕರಣದಲ್ಲಿ ವಿಚಾರಣೆಯಾಗಬೇಕೆಂದು ಕೇಳಿದ್ದಾರೆ. ಅಭಿಯೋಗವು ತನ್ನ ಪ್ರಕರಣವನ್ನು ರುಜುವಾತುಪಡಿಸಿಕೊಳ್ಳಲು ಒಟ್ಟು 10 ಜನ ಸಾಕ್ಷಿದಾರರ ಪಟ್ಟಿಯನ್ನು ನೀಡಿದ್ದು ಅದರಲ್ಲಿ ಕೇವಲ ಚಾ.ಸಾ.1 ವಿಜಯಲಕ್ಷ್ಮಿ ರವರನ್ನು ಅ.ಸಾ.1 ಎಂದು ವಿಚಾರಣೆ ಮಾಡಿಕೊಂಡು ನಿ.ಪಿ.1 ಮತ್ತು ಪಿ 2ರ ದಾಖಲೆಗಳನ್ನು ಗುರುತಿಸಿಕೊಂಡು ಅವರ ಪರ ಸಾಕ್ಷ್ಯ ಮುಕ್ತಾಯಗೊಳಿಸಿದ್ದಾರೆ. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 313ರಡಿ ಆರೋಪಿಯರ ಹೇಳಿಕೆಯನ್ನು ದಾಖಲಿಸಿಕೊಂಡಿದ್ದು ಆರೋಪಿಯರು ಅವರ ಮೊದಲಿನ ನಿಲುವನ್ನೇ ತಳೆದಿದ್ದಾರೆ.

4. ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ ಮತ್ತು ಆರೋಪಿಯರ ಪರ ನ್ಯಾಯವಾದಿಗಳಿಂದ ವಾದ ಪ್ರತಿವಾದವನ್ನು ಆಲಿಸಿದ್ದು ಮೊಕದ್ದಮೆಯ ಇತ್ಯರ್ಥಕ್ಕೆ ಈ ಕೆಳಗಿನ ಅಂಶಗಳು ಉದ್ಭವಿಸಿವೆ.

ಅಂಶ 1) ಅಭಿಯೋಜನೆಯು ಆರೋಪಿಯರ ವಿರುದ್ಧ ಮಾಡಿರುವ ಭಾರತ ದಂಡ ಸಂಹಿತೆ ಕಲಂ 498ಎ 420 506 ಸಹವಾಚಕ ಕಲಂ 34ರ ಅಪರಾಧಗಳನ್ನು ಸಂಶಯಾತೀತವಾಗಿ ರುಜುವಾತು ಪಡಿಸಿದೆಯೇ ?

ಅಂಶ 2) ಏನು ಆದೇಶ?

ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿವೆ.

ಅಂಶ 1) ನಕಾರಾತ್ಮಕ.

ಅಂಶ 2) ಅಂತಿಮ ಆದೇಶದಂತೆ.

## ಕಾರಣಗಳು

**5. ಅಂಶ 1 ಮತ್ತು 2 ಃ-** ಅ.ಸಾ.1 ವಿಜಯಲಕ್ಷ್ಮಿ ಅವರ ಮುಖ್ಯ ವಿಚಾರಣೆಯಲ್ಲಿ 1ನೇ ಆರೋಪಿ ಅವರ ಗಂಡ, 2ನೇ ಆರೋಪಿ ಅವರ ಅತ್ತೆ, ಇದ್ದು ಅವರ ಮತ್ತು 1ನೇ ಆರೋಪಿಯ ವಿವಾಹ ದಿನಾಂಕ 14.06.2012ರಂದು ನರಸಿಂಹಸ್ವಾಮಿ ದೇವಸ್ಥಾನದಲ್ಲಿ ನಡೆಯಿತೆಂದು ಅವರು ಮದುವೆ ಸಮಯದಲ್ಲಿ 1ನೇ ಆರೋಪಿಗೆ ಯಾವುದೇ ವರದಕ್ಷಿಣೆ ಕೊಟ್ಟಿರಲಿಲ್ಲವೆಂದು ಮತ್ತು ಆರೋಪಿಯರು ಕೇಳಿರಲಿಲ್ಲವೆಂದು 1ನೇ ಆರೋಪಿ ಅವರಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿರಲಿಲ್ಲವೆಂದು ಮತ್ತು 1ನೇ ಆರೋಪಿ ಮೋಸಮಾಡಿ ಕೆನಡಕ್ಕೆ ಹೋಗಿಲ್ಲ ಆದರೆ ಅವರ ಮತ್ತು 1ನೇ ಆರೋಪಿಯ ನಡುವೆ ಸಣ್ಣಪುಟ್ಟ ಗಲಾಟೆಯಾಗಿತ್ತೆಂದು ಆ ಬಗ್ಗೆ ಅವರು ದೂರು ಕೊಟ್ಟಿದ್ದು ದೂರಿನಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಸಾಕ್ಷಿಯು ಫಿರ್ಯಾದನ್ನು ಗುರ್ತಿಸಿದ್ದು ಅದರಲ್ಲಿರುವ ನಿಶಾನೆ ಪಿ 1 ಸಹಿ ಅವರದೆಂದು ಗುರ್ತಿಸಿದ್ದಾರೆ. ನಿಶಾನೆ ಪಿ 2 ಮಹಜರು ಇದ್ದು ನಿಶಾನೆ ಪಿ 2ಎ ಅವರ ಸಹಿ ಎಂದು ಗುರ್ತಿಸಿದ್ದಾರೆ ಆದರೆ ಮಹಜರಿನಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲವೆಂದು ಪೊಲೀಸರು ಅವರ ಮರು ಹೇಳಿಕೆ ಪಡೆದಿಲ್ಲ ಎಂದು ನುಡಿದಿದ್ದಾರೆ.

6. ಈ ಸಾಕ್ಷಿಯನ್ನು ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿಯ ಮೇರೆಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿಕೊಂಡು ಪಾಟೀ ಸವಾಲಿಗೆ ಒಳಪಡಿಸಿದ್ದಾರೆ.

7) ಫಿರ್ಯಾದುದಾರರು ಅವರ ದೂರಿನಲ್ಲಿ ಅವರ ಮತುತ 1ನೇ ಆರೋಪಿಯ ವಿವಾಹವಾದ ನಂತರ ಮತ್ತು ವಿವಾಹದ ಸಮಯದಲ್ಲಿ ಆರೋಪಿತರ ಒತ್ತಾಯದ ಮೇರೆಗೆ ವರದಕ್ಷಿಣೆ ನೀಡಿದ್ದು 1ನೇ ಆರೋಪಿಯು ಡಿಸೆಂಬರ್ 2011ರಲ್ಲಿ ಕೆನಡಾದಲ್ಲಿದ್ದಾಗ ಆತನು ನಿತ್ಯವೂ ಅವರನ್ನು ಮಾತನಾಡಿಸುತ್ತಿದ್ದುದಲ್ಲದೆ ಪ್ರೇಮಿಗಳ ದಿನದಂದು ಆತನು ಅವರಿಗೆ ಅನೇಕ ಉಡುಗೊರೆಗಳನ್ನು ನೀಡಿದ್ದು ಅಲ್ಲದೆ ಫಿಜಿಯೋಥೆರಫಿ ಚಿಕಿತ್ಸೆಗೆ ಆತನ ತಾಯಿಯನ್ನು ಕರೆದುಕೊಂಡು ಹೋಗಲು ತಿಳಿಸಿದ್ದ. ಆತನು ಜನವರಿ 2012ರಂದು ಭಾರತಕ್ಕೆ ಬಂದ ಅ ದಿನ ನಾಗರಬಾವಿ ಮನೆಗೆ ಫಿರ್ಯಾದುದಾರರು ಕರೆದ ಆದಿನ ಅತನು ಒಬ್ಬನೇ ಮನೆಯಲ್ಲಿದ್ದ ಮತ್ತು ಮನೆಯಲ್ಲಿ ಒಬ್ಬನೇ ಇದ್ದ ಕಾರಣ ಅತನು ಅವರ ಬಳಿ ಬಂದು ಕುಳಿತುಕೊಂಡು ಮಾತನಾಡಲು ಪ್ರಾರಂಭ ಮಾಡಿದ.

ಫಿರ್ಯಾದುದಾರರು ಅತನಿಗೆ ದೂರ ಇರಲು ಹೇಳಿದರೆಂದು, ಅಲ್ಲದೆ ಅತನು ಅವರಿಗೆ ಮಾನಸಿಕ ಮತ್ತು ಲೈಂಗಿಕ ತೊಂದರೆ ನೀಡುತ್ತಿದ್ದನೆಂದು ದೂರಿನಲ್ಲಿ ನಮೂಧಿಸಿದ್ದಾರೆ.

8.ಆದರೆ ಫಿರ್ಯಾದುದಾರರು ಅವರ ಮುಖ್ಯ ವಿಚಾರಣೆಯಲ್ಲಿ ಫಿರ್ಯಾದಿನಲ್ಲಿ ಬರೆದಿರುವ ವಿಷಯ ಗಳ ಕುರಿತು ಗೊತ್ತಿಲ್ಲ ಸಣ್ಣಪುಟ್ಟ ಗಲಾಟೆಯಾದ್ದರಿಂದ ಆರೋಪಿತರ ವಿರುದ್ಧ ಅವರು ದೂರು ಸಲ್ಲಿಸಿದ್ದರೆಂದು ನುಡಿದಿದ್ದಾರೆ. ದೂರು ಕೊಟ್ಟ ನಂತರ ಪೊಲೀಸರು ಸ್ಥಳಕ್ಕೆ ಬಂದು ನಿಶಾನೆ ಪಿ 2ರ ಮಹಜರು ಬರೆದರೆಂದು ಮಹಜರಿನಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲವೆಂದು ಪೊಲೀಸರು ಅವರ ಮರು ಹೇಳಿಕೆಯನ್ನು ಪಡೆದುಕೊಂಡಿಲ್ಲವೆಂದು ನುಡಿದಿದ್ದಾರೆ.

9. ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಿ ಈಗ ನೀವು ಮತ್ತು 1ನೇ ಅರೋಪಿ ರಾಜಿ ಮಾಡಿಕೊಂಡು ಆರೋಪಿಯು ನಿಮಗೆ ಜೀವನಾಂಶವೆಂದು ನಾಲ್ಕುಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂಬ ಸೂಚನೆಯನ್ನು ಸಾಕ್ಷಿಯು ಒಪ್ಪಿದ್ದಾರೆ. ಆರೋಪಿ ಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 313ರಡಿ ವಿಚಾರಿಸಿದಾಗ 1ನೇ ಅರೋಪಿಯು ಫಿರ್ಯಾದು ದಾರರ ಜೊತೆಗೆ ಅವರ ಮದುವೆ ದಿನಾಂಕ 14.06.2012ರಂದು ನರಸಿಂಹಸ್ವಾಮಿ ದೇವಸ್ಥಾನದಲ್ಲಿ ನಡೆಯಿತೆಂದು ಹೇಳಿರುವುದು ಸುಳ್ಳು ಎಂದು ಹೇಳಿದ್ದಾರೆ. ಆರೋಪಿ 1 ರವರು, ಪಿರ್ಯಾದುದಾರರು ಸಂಜಯ್ ರವರ ಜೊತೆಗೆ ಮದುವೆಯಾಗಿದ್ದು ಆ ಮದುವೆಯನ್ನು ಫಿರ್ಯಾದುದಾರರು ಎಂ ಸಿ ನಂ.4020-2011ನ್ನು ಕೌಟುಂಬಿಕ ನ್ಯಾಯಾಲದಲ್ಲಿ ವಿವಾಹ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ್ದು ಅದರ ನಕಲನ್ನು ಹಾಜರುಪಡಿಸಿದ್ದಾರೆ. ಸದರಿ ಪ್ರಕರಣದಲ್ಲಿ ಅರ್ಜಿದಾರ ಮತ್ತು ಎದುರುದಾರರ ವಿವಾಹ ದಿನಾಂಕ 24.10.2004ರಂದು ಮಂಜುನಾಥಸ್ವಾಮಿ ಸನ್ನಿಧಿ ಧರ್ಮಸ್ಥಳದಲ್ಲಿ ನಡೆದಿದ್ದು ಆ ಮದುವೆ ರದ್ದುಪಡಿಸಿದ್ದಾರೆ. ಸದರಿ ಆದೇಶ ದಿನಾಂಕ 9.4.2013ರಂದು ನಡೆದಿರುತ್ತದೆ. ಈ ಕಾರಣದಿಂದ 1ನೇ ಅರೋಪಿಯು ದಂಡ ಪ್ರಕ್ರಿಯಾ ಸಂಹಿತೆ ಕಲಂ 313ರ ಪ್ರಶ್ನೆ ಮಾಡಿದಾಗ ದಿನಾಂಕ 14.6.2012ರಂದು ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಮದುವ ನಡೆದಿಲ್ಲ ಎಂದು ಉತ್ತರಿಸಿದ್ದಾರೆ. ಆದರೆ ಈ ಕುರಿತು ಯಾವುದೇ ಸಾಕ್ಷ್ಯವನ್ನು ಒದಗಿಸಿಲ್ಲ, ಆದರೆ ಎಂ ಸಿ ಪ್ರಕರಣದಲ್ಲಿ ಫಿರ್ಯಾದುದಾರರು ಮತ್ತು ಸಂಜಯ್ ರವರ ವಿವಾಹವಾಗಿರುವುದನ್ನು ನ್ಯಾಯಾಲಯ ದಿನಾಂಕ 13.09.2013ರಂದು ರದ್ದುಪಡಿಸಿದೆ.

10. ಫಿರ್ಯಾದನ್ನು ಪರಿಶೀಲಿಸಿದಾಗ ಅವರ ವಿವಾಹ 1ನೇ ಅರೋಪಿಯ ಜೊತೆ ನಡೆದಿರುವುದು ಕಂಡು ಬರುತ್ತದೆ. ಎಂ ಸಿ ಪ್ರಕರಣ ಚಾಲ್ತಿಯಲ್ಲಿದ್ದಾಗಲೇ 1ನೇ ಅರೋಪಿ ಫಿರ್ಯಾದುದಾರರನ್ನು

ವಿವಾಹವಾಗಿರಬಹುದೆಂದು ಕಂಡು ಬರುತ್ತದೆ. ತನಿಖಾಧಿಕಾರಿಯು ದೋಷಾರೋಪಣಾಪಟ್ಟಿ ಸಲ್ಲಿಸಿದ್ದು ಫಿರ್ಯಾದುದಾರರು 1ನೇ ಆರೋಪಿಯನ್ನು ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಆಗಿರುತ್ತದೆ ಎಂಬುದನ್ನು ವಿವರಿಸಿದ್ದಾರೆ. ಫಿರ್ಯಾದುದಾರರು ಸಹಾ ಈ ಪ್ರಕರಣದಲ್ಲಿ ತಾನು ಮತ್ತು ಆರೋಪಿ ರಾಜಿಯಾಗಿದ್ದು ಆರೋಪಿಯಿಂದ ತಾನು ನಾಲ್ಕುಲಕ್ಷ ರೂಪಾಯಿಗಳನ್ನು ಪರಿಹಾರವಾಗಿ ಪಡೆದುಕೊಂಡಿರುವುದನ್ನು ಒಪ್ಪಿದ್ದಾರೆ. ಅಂದ ಮೇಲೆ 1ನೇ ಆರೋಪಿಯ ಪತ್ನಿ ಫಿರ್ಯಾದುದಾರರು ಅಲ್ಲವಾಗಿದ್ದರೆ 1ನೇ ಆರೋಪಿಯು ನಾಲ್ಕುಲಕ್ಷ ರೂಗಳನ್ನು ಪರಿಹಾರವಾಗಿ ಕೊಡುವ ಪ್ರಮೇಯವೇ ಬರುತಿರಲಿಲ್ಲ. ಈ ಕಾರಣದಿಂದ ಆರೋಪಿಯು ದಂಡ ಪ್ರಕ್ರಿಯಾ ಸಂಹಿತೆ ಕಲಂ 313ರ ಹೇಳಿಕೆಯಲ್ಲಿ ಮದುವೆಯಾಗಿಲ್ಲ ಎಂಬುದನ್ನು ಬಿಟ್ಟು ಬೇರೆ ಸಾಕ್ಷ್ಯವನ್ನು ಒದಗಿಸಿಲ್ಲ. ಅ.ಸಾ.1ರವರ ಸಾಕ್ಷ್ಯವನ್ನು ಗಣನೆಗೆ ತೆಗೆದು ಕೊಂಡು ಉಳಿದ ಸಾಕ್ಷಿಗಳನ್ನು ಅಭಿಯೋಜನೆ ವಿಚಾರಣೆಗೊಳಪಡಿಸಿದರೂ ಅದರಿಂದ ಯಾವುದೇ ಪ್ರಯೋಜನವಾಗದೆಂಬ ಅಭಿಪ್ರಾಯದಲ್ಲಿ ಅಭಿಯೋಜಕರ ಕೋರಿಕೆಯನ್ನು ತಿರಸ್ಕರಿಸಿದೆ. ಕಾರಣ ಅಭಿಯೋಜನೆಯು ಆರೋಪಿಯರ ವಿರುದ್ಧ ಮಾಡಿರುವ ಅಪರಾಧಗಳನ್ನು ರುಜುವಾತುಪಡಿಸುವಲ್ಲಿ ಸಂಪೂರ್ಣ ವಿಫಲವಾಗಿದೆ ಎಂದು ಹೇಳಿ ಅಂಶ 1ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದು ಅಂಶ 2ಕ್ಕೆ ಈ ಕೆಳಗಿನಂತೆ ಮಾಡುವ

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1)ರಡಿ ದತ್ತಕವಾದ ಅಧಿಕಾರವನ್ನು ಬಳಸಿ, 1 ಮತ್ತು 2ನೇ ಆರೋಪಿಯರ ವಿರುದ್ಧ ಮಾಡಲಾಗಿರುವ ಭಾರತ ದಂಡ ಸಂಹಿತೆ ಕಲಂ 498ಎ 420 506 ಸಹವಾಚಕ ಕಲಂ 34ರ ಶಿಕ್ಷಾರ್ಹ ಅಪರಾಧಗಳಿಂದ ಆರೋಪಿಯರನ್ನು ನಿರ್ದೋಷಿಗಳೆಂದು ಬಿಡುಗಡೆ ಮಾಡಿದೆ.

ಆರೋಪಿಯರು ನ್ಯಾಯಾಲಯಕ್ಕೆ ಬರೆದುಕೊಟ್ಟಿರುವ ಸ್ವಂತ ಹಾಗೂ ಜಾಮೀನುದಾರರ ಜಾಮೀನು ಮುಚ್ಚಳಿಕೆಗಳನ್ನು ರದ್ದುಪಡಿಸಿದೆ.

(ಮೇಲಿನ ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು, ಅವರಿಂದ ಗಣಕೀಕರಿಸಿದ ನಂತರ ನನ್ನಿಂದ ತಿದ್ದುಪಡಿ ಮಾಡಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 16ನೇ ಮಾರ್ಚ್ 2015ರಂದು ನನ್ನ ಸಹಿಯೊಂದಿಗೆ ಉದ್ಘೋಷಿಸಲಾಯಿತು.)

( ಎಂ. ಸಿ. ನಾಡಗೌಡ )
ಮಹಾನಗರ 2ನೇ ಅಪರ ಮುಖ್ಯ ದಂಡಾಧಿಕಾರಿ
ಬೆಂಗಳೂರು.

ಪರಿವಿಡಿ ಃ

1. ಅಭಿಯೋಜನೆ ಪರ ವಿಚಾರಣೆಗೊಳಪಟ್ಟ ಸಾಕ್ಷಿಗಳ ಹೆಸರು ಃ

ಅ.ಸಾ-1 ವಿಜಯಲಕ್ಷ್ಮಿ

ಅಭಿಯೋಜನೆಯ ಪರ ಗುರ್ತಿಸಲಾದ ನಿಶಾನೆಗಳು ಃ-

ನಿಪಿ-1 ದೂರು

ನಿಪಿ-1ಎ ಸಹಿ

ನಿಪಿ-2 ಸ್ಥಳ ಮಹಜರು

ನಿಪಿ-2ಎ ಸಹಿ

ಅಭಿಯೋಜನೆಯ ಪರ ಗುರ್ತಿಸಿದ ಮುದ್ದೇಮಾಲುಗಳು ಃ

ಇಲ್ಲ

ಆರೋಪಿಯರ ಪರ ವಿಚಾರಣೆಗೊಳಪಟ್ಟ ಸಾಕ್ಷಿಗಳ ಹೆಸರು ಃ

ಇಲ್ಲ

ಆರೋಪಿಯರ ಪರ ಗುರ್ತಿಸಲಾದ ನಿಶಾನೆಗಳು ಃ

ಇಲ್ಲ

**( ಎಂ. ಸಿ. ನಾಡಗೌಡ )**

ಮಹಾನಗರ 2ನೇ ಅಪರ ಮುಖ್ಯ ದಂಡಾಧಿಕಾರಿ

ಬೆಂಗಳೂರು.

ತೀರ್ಪನ್ನು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1)ರಡಿ ದತ್ತಕವಾದ ಅಧಿಕಾರವನ್ನು ಬಳಸಿ, 1 ಮತ್ತು 2ನೇ ಆರೋಪಿಯರ ವಿರುದ್ಧ ಮಾಡಲಾಗಿರುವ ಭಾರತ ದಂಡ ಸಂಹಿತೆ ಕಲಂ 498ಎ 420 506 ಸಹವಾಚಕ ಕಲಂ 34ರ ಶಿಕ್ಷಾರ್ಹ ಅಪರಾಧಗಳಿಂದ ಆರೋಪಿಯರನ್ನು ನಿರ್ದೋಷಿಗಳೆಂದು ಬಿಡುಗಡೆ ಮಾಡಿದೆ.

ಆರೋಪಿಯರು ನ್ಯಾಯಾಲಯಕ್ಕೆ ಬರೆದುಕೊಟ್ಟಿರುವ ಸ್ವಂತ ಹಾಗೂ ಜಾಮೀನುದಾರರ ಜಾಮೀನು ಮುಚ್ಚಳಿಕೆಗಳನ್ನು ರದ್ದುಪಡಿಸಿದೆ.

ಪ್ರತ್ಯೇಕ ತೀರ್ಪು ಮಾಡಿದೆ.

ಮಹಾನಗರ 2ನೇ ಅಪರ ಮುಖ್ಯ ದಂಡಾಧಿಕಾರಿ

**ಉಪಸ್ಥಿತರು ಃ ಶ್ರೀ ಕಸನಪ್ಪ ನಾಯ್ಕ, ಎಂ.ಎ., ಎಲ್ಎಲ್ಎಂ.,**
**ಮ. ನ. 2ನೇ ಅಪರ ಮು. ದಂಡಾಧಿಕಾರಿಗಳು.**

***ದಂಡ ಪ್ರಕ್ರಿಯಾ ಸಂಹಿತೆ ಕಲಂ 355ರ ಅಡಿ ತೀರ್ಪು***

| | | |
|---|---|---|
| **ಅಪರಾಧವೆಸಗಿದ ದಿನಾಂಕ** | ಃ | **06.05.2007** |
| **ಪಿರ್ಯಾಧಿ** | ಃ | ರಾಜ್ಯ ಸರ್ಕಾರದ ಪರವಾಗಿ ಸುಬ್ರಮಣ್ಯಪುರ ಆರಕ್ಷಕರ ಠಾಣೆ ಪೊಲೀಸರು ಬೆಂಗಳೂರು. |
| **ಆರೋಪಿಗಳ ಹೆಸರು ಮತ್ತು ವಿಳಾಸ** | ಃ | 1) ಲಕ್ಷ್ಮಿಪತಿ ಬಿನ್ ನರಸಿಂಹರಾಜು, 29 ವರ್ಷ<br>2) ಗೋಪಿ ಬಿನ್ ನಾರಾಯಣಪ್ಪ 51 ವರ್ಷ, ಇಬ್ಬರೂ ಆರೋಪಗಳ ವಾಸ ನಂ.37/2, ದೊಡ್ಡಗೌಡನ ಪಾಳ್ಯ ಬೆಂಗಳೂರು. |
| **ಅಪರಾಧ** | ಃ | ಭಾ.ದಂ.ಸಂ. ಕಲಂ 353 ಸಹವಾಚಕ ಕಲಂ 34ರಡಿ |
| **ಆಪಾದನೆ** | ಃ | ಆರೋಪಿಗಳು ತಪ್ಪು ಒಪ್ಪಿಕೊಂಡಿಲ್ಲ |
| **ಅಂತಿಮ ಆದೇಶ** | ಃ | ಆರೋಪಿಯರನ್ನು ಆಪಾದನೆಯಿಂದ ನಿರ್ದೋಷಿಗಳೆಂದು ಬಿಡುಗಡೆ ಮಾಡಿದೆ. |

**ಕಾರಣಗಳ ಸಂಕ್ಷಿಪ್ತ ವಿವರಣೆ**

**ಸುಬ್ರಮಣ್ಯಪುರ ಆರಕ್ಷಕ ಠಾಣೆಯ ಆರಕ್ಷಕ ಉಪನಿರೀಕ್ಷಕರು** ಆರೋಪಿಯರ ವಿರುದ್ದ ಭಾರತ ದಂಡ ಸಂಹಿತೆ ಕಲಂ 353 ಸಹವಾಚಕ ಕಲಂ 34ರಡಿಯಲ್ಲಿ ಉಂಟಾಗುವ ಅಪರಾಧದಡಿ ಕ್ರಮ ತೆಗೆದುಕೊಳ್ಳುವಂತೆ ಕೋರಿ ಮೊಕದ್ದಮೆಯನ್ನು ದಾಖಲು ಮಾಡಿದ್ದಾರೆ.

**2. ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇದೆ.**

ದಿನಾಂಕ 06.05.2007 ರಂದು ಬೆಳಿಗ್ಗೆ ದೊಡ್ಡಗೌಡನಪಾಳ್ಯ ಸೈಕಲ್ ಶಾಪ್ ರಸ್ತೆಯಲ್ಲಿಯರುವ ಚಾ.ಸಾ.7.ರವರಿಗೆ ಸೇರಿದ ಮನೆ ನಂ.37/2ರ 2ನೇ ಮಹಡಿಯಲ್ಲಿ ವಾಸವಿರುವ ಚಾ.ಸಾ.7 ಮತ್ತು 8ರವರಿಗೆ 1ನೇ ಆರೋಪಿಯು ಆಸ್ತಿಯ ವಿಚಾರದಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದಾಗ, ಸರ್ಕಾರಿ

ಕರ್ತವ್ಯದಲ್ಲಿದ್ದ ಚಾ.ಸಾ.1 ಮತ್ತು 2ರವರು ಅದೇ ದಿನ ಬೆಳಿಗ್ಗೆ 9.40ರ ಸಮಯದಲ್ಲಿ 1ನೇ ಆರೋಪಿಯನ್ನು ಪೊಲೀಸರ್ ಠಾಣೆಗೆ ಕರೆದಾಗ 1 ಮತ್ತು 2ನೇ ಆರೋಪಿಗಳು ಸಮಾನ ಉದ್ದೇಶ ದಿಂದ ಚಾ.ಸಾ.1 ಮತ್ತು 2ರವರಿಗೆ ಆವಾಚ್ಯ ಶಬ್ದಗಳಿಂದ ನಿಂದಿಸಿ ನೀವು ಯಾರು ಬೋಳಿ ಮಕ್ಕಳ ನಮ್ಮನ್ನು ಪೊಲೀಸ್ ಠಾಣೆಗೆ ಕರೆಯುವುದಕ್ಕೆ ಎಂದು ಬೈದು 1ನೇ ಆರೋಪಿ ಚಾ.ಸಾ.1ರವರ ಸಮವಸ್ತ್ರದ ಶರ್ಟಿನ ಬಲಭಾಗ ಜೇಬನ್ನು ಎಳೆದು ಹರಿದು ಹಾಕಿ 2ನೇ ಆರೋಪಿ ಶರ್ಟಿನ ಎಡ ಬುಜದ ಪ್ಲಾಪಿಯನ್ನು ಎಳೆದು ಗುಂಡಿಯನ್ನು ಕಿತ್ತುಹಾಕಿದ್ದಲ್ಲದೆ ಅವರಿಗೆ ಸರ್ಕಾರಿ ಕರ್ತವ್ಯ ನಿರ್ವಹಿಸಲು ಅಡ್ಡಿಪಡಿಸಿದ್ದು, ಕಾರಣ ಭಾರತ ದಂಡ ಸಂಹಿತೆಯ ಕಲಂ 353 ಸಹವಾಚಕ 34ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಆರೋಪಿಸಲಾಗಿದೆ.

3. ಆರೋಪಿಯರನ್ನು ಪೊಲೀಸರು ನ್ಯಾಯಾಲಯದಲ್ಲಿ ಹಾಜರುಪಡಿಸಿದಾಗ ಆರೋಪಿಯರಿಗೆ ನ್ಯಾಯಾಲಯ ಜಾಮೀನು ಮುಂಜೂರು ಮಾಡಿದೆ. ನಂತರ ಆರೋಪಿಗಳಿಗೆ ದೋಷಾರೋಪಣಾ ಪಟ್ಟಿಯ ನಕಲುಗಳನ್ನು ಒದಗಿಸಿದೆ. ಆರೋಪಿಯರ ವಿರುದ್ದ ಭಾರತ ದಂಡ ಸಂಹಿತೆ ಕಲಂ 353 ಸಹವಾಚಕ ಕಲಂ 34ರಡಿ ದೋಷಾರೋಪಣೆಯನ್ನು ರಚಿಸಿ ಅವರಿಗೆ ಓದಿ ವಿವರಿಸಿ ಹೇಳಿದಾಗ, ಆರೋಪಿಗಳು ಯಾವುದೇ ತಪ್ಪು ಮಾಡಿಲ್ಲವೆಂದು ಹೇಳಿ ಪ್ರಕರಣದಲ್ಲಿ ವಿಚಾರಣೆಯಾಗಬೇಕೆಂದು ಕೇಳಿದ್ದಾರೆ. ಅಭಿಯೋಗವು ತನ್ನ ಪ್ರಕರಣವನ್ನು ರುಜುವಾತುಪಡಿಸಿಕೊಳ್ಳಲು ಒಟ್ಟು 15 ಜನ ಸಾಕ್ಷಿ ದಾರರ ಪಟ್ಟಿಯನ್ನು ನೀಡಿದ್ದು ಅದರಲ್ಲಿ ಕೇವಲ ಚಾ.ಸಾ.1,2,7 ಮತ್ತು 8ರವರನ್ನು ಅ.ಸಾ.1 ರಿಂದ 4 ಎಂದು ವಿಚಾರಣೆ ಮಾಡಿಕೊಂಡು ನಿ.ಪಿ-1 ರಿಂದ 4ರ ದಾಖಲೆಗಳನ್ನು ಗುರುತಿಸಿಕೊಂಡು ತಮ್ಮ ಪರ ಸಾಕ್ಷ್ಯ ಮುಕ್ತಾಯಗೊಳಿಸಿದ್ದಾರೆ. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 313ರಡಿ ಆರೋಪಿಯ ಹೇಳಿಕೆಯನ್ನು ಪಡೆದುಕೊಂಡಿದೆ. ಅದರಲ್ಲಿ ಆರೋಪಿಗಳು ಅವರನ್ನು ಅಪರಾದಕ್ಕೊಳಪಡಿಸುವ ಯಾವತ್ತೂ ಸಾಕ್ಷ್ಯವನ್ನು ಅಲ್ಲಗಳೆದಿದ್ದಾರೆ. ಆರೋಪಿಗಳು ತಮ್ಮ ಪರವಾಗಿ ಯಾವುದೇ ಮೌಖಿಕ ಅಥವಾ ದಾಖಲಾತಿ ಸಾಕ್ಷ್ಯವನ್ನು ಹಾಜರುಮಾಡಿಲ್ಲ.

4. ವಾದ ಮತ್ತು ಪ್ರತಿವಾದ ಕೇಳಲಾಗಿದೆ.

## ಕಾರಣಗಳು

5. ಅ.ಸಾ.1 ಸುಂದರ್‌ರಾವ್, ಸುಬ್ರಮಣ್ಯಪುರ ಆರಕ್ಷಕ ಠಾಣೆಯ ಮುಖ್ಯ ಪೇದೆ ಇದ್ದು ಅವರ ಸಾಕ್ಷ್ಯದಲ್ಲಿ ಅವರಿಗೆ ಆರೋಪಿ ಗೊತ್ತೆಂದು ದಿನಾಂಕ 06.05.2007ರಂದು ಬೆಳಿಗ್ಗೆ 8 ಘಂಟೆಯಲ್ಲಿ

ಅವರಿಗೆ ಚಿತಾ ನಂ.90ರ ಮೋಟಾರು ಸೈಕಲ್‌ನಲ್ಲಿ ಗಸ್ತು ಕರ್ತವ್ಯದಲ್ಲಿ ನೇಮಕವಾಗಿದ್ದು, ಅವರ ಜೊತೆಗೆ ಪೇದೆ ಸಂಖ್ಯೆ.9948 ಸಂತೋಷ್ ಕುಮಾರ್ ಕೂಡ ಇದ್ದು ಆ ದಿನ ಬೆಳಿಗ್ಗೆ ಅವರಿಗೆ ಬಂದ ನಿಸ್ತಂತು ಸಂದೇಶದಂತೆ ಗೌಡನ ಪಾಳ್ಯ ಹೊಂಗೆ ಮರದ ಬಳಿ ನರಸಿಂಹಬಾಬು ಬರುತ್ತಾರೆ ಏನೋ ಗಲಾಟೆ ನಡೆಯುತ್ತಿದೆಯಂತೆ ನೀವು ಸ್ಥಳಕ್ಕೆ ಹೋಗಿ ಎಂದು ತಿಳಿಸಿದ್ದು, ಆದರಂತೆ ಅವರು ಸ್ಥಳಕ್ಕೆ ಹೋದಾಗ ಸ್ಥಳದಲ್ಲಿ ನರಸಿಂಹಬಾಬು ಅವರಿಗಾಗಿ ಕಾಯುತ್ತಿದ್ದು ಅವರ ಮನೆಯಲ್ಲಿ ಗಲಾಟೆ ನಡೆಯುತ್ತಿದೆ ಎಂದು ಅಲ್ಲಿಗೆ ಬರುವಂತೆ ಹೇಳಿದ್ದರಿಂದ ಅವರುಗಳು ನರಸಿಂಹಬಾಬುರವರ ಮನೆ ಬಳಿ ಹೋಗಿದ್ದು ನರಸಿಂಹಬಾಬು ಕುಟುಂಬದ ನಡುವೆ ಗಲಾಟೆಯಾಗುತ್ತಿದ್ದು, ನರಸಿಂಹಬಾಬುರವರ ಮಗ ಲಕ್ಷ್ಮಿಪತಿ ಗಲಾಟೆ ಮಾಡುತ್ತಿದ್ದರು. ಕಾರಣ ಅವರು ಲಕ್ಷ್ಮಿಪತಿಯನ್ನು ಠಾಣೆಗೆ ಬರುವಂತೆ ತಿಳಿಸಿದಾಗ ಲಕ್ಷ್ಮಿಪತಿ ಮತ್ತು ಅವರ ಬಾವ ಗೋಪಿ ಅವರನ್ನು ಕುರಿತು ತಮ್ಮನ್ನು ಕರೆಯಲು ನೀವು ಯಾರು ಎಂದು ಹೇಳಿ ಆವಾಚ್ಯ ಶಬ್ದಗಳಿಂದ ನಿಂದಿಸಿದರೆಂದು ಗೋಪಿರವರು ಅವರ ಸಮವಸ್ತ್ರದಲ್ಲಿದ್ದ ಎಡಬುಜದ ಪ್ಲಾಪಿಯನ್ನು ಕಿತ್ತುಹಾಕಿದ್ದು ಅವರ ಜೇಬು ಎಳೆದು ಕಿತ್ತುಹಾಕಿದ್ದು ಲಕ್ಷ್ಮಿಪತಿ ಕೈಯಿಂದ ಮುಖಕ್ಕೆ ಹೊಡೆದ ಕಾರಣ ಅವರು ಹೊಯ್ಸಳ ವಾಹನ ಸಿಬ್ಬಂದಿಗೆ ಮಾಹಿತಿ ನೀಡಿದಾಗ ಸದರಿ ಸಿಬ್ಬಂದಿಯು ಸ್ಥಳಕ್ಕೆ ಬರುವುದನ್ನು ನೋಡಿ ಆರೋಪಿಗಳು ಅಲ್ಲಿಂದ ಓಡಿ ಹೋದರು ಆನಂತರ ಅವರು ಠಾಣೆಗೆ ಬಂದು ನಿಶಾನೆ ಪಿ.1ರ ದೂರು ಸಲ್ಲಿಸಿದಾಗ ಪೊಲೀಸರು ಸ್ಥಳಕ್ಕೆ ಬಂದು ನಿಶಾನೆ ಪಿ.2ರ ಮಹಜರು ಬರೆದರೆಂದು ಮತ್ತು ನಿಶಾನೆ ಪಿ.4ರ ಜಪ್ತಿ ಮಹಜರು ಬರೆದು ಹರಿದಿದ್ದ ಸಮವಸ್ತ್ರವನ್ನು ವಶಪಡಿಸಿಕೊಂಡರೆಂದು ನುಡಿದಿದ್ದಾರೆ.

6. ಅ.ಸಾ.2 ಸಂತೋಷ್‌ಕುಮಾರ್ ಅವರ ಸಾಕ್ಷ್ಯದಲ್ಲಿ ತಾನು ಅ.ಸಾ.1ರವರ ಜೊತೆ ಗಸ್ತು ಕರ್ತವ್ಯದಲ್ಲಿದ್ದುದಾಗಿ ನುಡಿದಿದ್ದು ಇವರು ಸಹ ಅ.ಸಾ.1ರವರ ಸಾಕ್ಷ್ಯವನ್ನು ಅನುಸರಿಸಿ ಸಾಕ್ಷ್ಯ ನುಡಿದಿದ್ದಾರೆ.

7. ಅ.ಸಾ.1ರವರನ್ನು ಆರೋಪಿಗಳ ಪರ ನ್ಯಾಯವಾದಿಗಳು ಪಾಟೀಸವಾಲಗೆ ಒಳಪಡಿಸಿ ಅವರ ಸಾಕ್ಷ್ಯವನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದಾರೆ. ಘಟನಾ ಸ್ಥಳದಲ್ಲಿ ಸಾಕಷ್ಟು ಮನೆಗಳಿವೆ, ನರಸಿಂಹಬಾಬುರವರ ಮನೆಯಲ್ಲಿ ಬಾಡಿಗೆದಾರರು ವಾಸವಿದ್ದಾರೆ ನಿಮಗೆ ಆರೋಪಿಗಳು ಎಂದು ಹೊಡೆದಿರಲಿಲ್ಲ ಮತ್ತು ನಿಮ್ಮ ಸರ್ಕಾರಿ ಸೇವೆಗೆ ಅಡ್ಡಿಪಡಿಸಿಲ್ಲವೆಂದು ಮಾಡಿದ ಸೂಚನೆಯನ್ನು ಸಾಕ್ಷಿಯು ಅಲ್ಲಗಳೆದಿದ್ದಾರೆ.

8. ಅ.ಸಾ.2ರವರ ಸಾಕ್ಷ್ಯವನ್ನು ಪಾಟೀಸವಾಲು ಮಾಡುವ ಮೂಲಕ ಸಂಪೂರ್ಣವಾಗಿ ಅಲ್ಲಗಳೆದಿದ್ದಾರೆ. ನೀವು ಸ್ಥಳಕ್ಕೆ ಹೋದಾಗ ಅಲ್ಲಿ ಯಾವುದೇ ಗಲಾಟೆ ನಡೆಯುತ್ತಿರಲಿಲ್ಲವೆಂದು ಮಾಡಿದ ಸೂಚನೆಯನ್ನು ಸಾಕ್ಷಿಯು ಒಪ್ಪುತ್ತಾರೆ. ನರಸಿಂಹಬಾಬುರವರು ಪೊಲೀಸ್ ಠಾಣೆಗೆ ದೂರು ಸಲ್ಲಿಸಿರಲಿಲ್ಲವೆಂದು ಮಾಡಿದ ಸೂಚನೆಯನ್ನು ಸಾಕ್ಷಿಯು ಅಲ್ಲಗಳೆದಿದ್ದಾರೆ. ನೀವು ದೂರು ಸಲ್ಲಿಸಲು ಅವರನ್ನು ಕೇಳಿಕೊಂಡಿರುತ್ತೀರೆಂದು ಮಾಡಿದ ಸೂಚನೆಯನ್ನು ಸಾಕ್ಷಿಯು ಒಪ್ಪುತ್ತಾರೆ. ಸದರಿ ನರಸಿಂಹಬಾಬುರವರ ಮನೆ ಚಿಕ್ಕದ್ದಾಗಿದ್ದು ಅದು 8 X 10 ಅಡಿ ವಿಸ್ತೀರ್ಣವಿದೆ ಎಂದು ಮಾಡಿದ ಸೂಚನೆಯನ್ನು ಸಾಕ್ಷಿಯು ಒಪ್ಪುತ್ತಾರೆ.

9. ಅ.ಸಾ.3 ನರಸಿಂಹಬಾಬು ಮತ್ತು ಅ.ಸಾ.4 ಶ್ರೀಮತಿ ಸುಭದ್ರ ಪತಿ ಪತ್ನಿ ಇದ್ದು, ಅವರ ಸಾಕ್ಷ್ಯದಲ್ಲಿ 1ನೇ ಆರೋಪಿ ತಮ್ಮ ಮಗನಿದ್ದು 2ನೇ ಆರೋಪಿ ಅ.ಸಾ.3ರವರ ಸಹೋದರ ಇರುತ್ತಾರೆಂದು ಒಪ್ಪಿದ್ದಾರೆ. ಆದರೆ ಅವರೇ ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದಾರೆ. ಕಾರಣ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರವರು ಇವರುಗಳನ್ನು ಸವಿಸ್ತಾರ ಪಾಟೀಸವಾಲಿಗೆ ಒಳಪಡಿಸಿ ಇಬ್ಬರೂ ಸಾಕ್ಷಿಗಳು ಅವರ ಯಾವಸ್ತೂ ಉತ್ತರ ಸೂಚಕ ಪ್ರಶ್ನೆಗಳಿಗೆ ನಕಾರಾತ್ಮಕ ಉತ್ತರ ನೀಡಿದ್ದಾರೆ.

10. ಪ್ರಕರಣದಲ್ಲಿ ಅ.ಸಾ.1 ಮತ್ತು 2ರವರು ಪೊಲೀಸ್ ಸಾಕ್ಷ್ಯಗಳಿದ್ದು ಇವರುಗಳ ಸಾಕ್ಷ್ಯವು ಔಪಚಾರಿಕ ಸ್ವರೂಪದ್ದು ಇದೆ. ಅ.ಸಾ.3 ಮತ್ತು 4ರವರು ಬಾಧಿತ ವ್ಯಕ್ತಿಗಳಿದ್ದಾರೆ. ಆದರೆ ಈ ಸಾಕ್ಷಿದಾರರೇ ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿದ್ದಾರೆ. ಅ.ಸಾ.1 ಮತ್ತು 2ರವರ ಸಾಕ್ಷ್ಯವನ್ನು ಪಾಟೀಸವಾಲಿನಲ್ಲಿ ಆರೋಪಿಗಳ ಪರ ನ್ಯಾಯವಾದಿಗಳು ಅಲ್ಲಗಳೆದಿದ್ದಾರೆ, ಕಾರಣ ಅಭಿಯೋಜನೆಯು ಅ.ಸಾ.1 ಮತ್ತು 2ರವರ ಸಾಕ್ಷ್ಯವನ್ನು ಪುಷ್ಠೀಕರಿಸಲು ಸೂಕ್ತ ಮೌಖಿಕ ಮತ್ತು ದಾಖಲೆಗಳ ಸಾಕ್ಷ್ಯವನ್ನು ಆಧಾರಿಸಿ ಆರೋಪಿಗಳನ್ನು ದೋಷಿಗಳೆಂದು ಶಿಕ್ಷಿಸಲು ಬರುವುದಿಲ್ಲ, ಹೀಗಾಗಿ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿಗಳ ವಿರುದ್ದ ಮಾಡಿರುವ ಭಾರತ ದಂಡ ಸಂಹಿತೆಯ ಕಲಂ 353 ಸಹವಾಚಕ ಕಲಂ 34ರ ಆಪಾದನೆಗಳನ್ನು ಸಂಶಯಾತೀತವಾಗಿ ರುಜುವಾತು ಪಡಿಸಲು ವಿಫಲವಾಗಿದ್ದು, ಕಾರಣ ಆರೋಪಿಗಳು ತಮ್ಮ ಮೇಲಿನ ಆಪಾದನೆಗಳಿಂದ ಬಿಡುಗಡೆ ಹೊಂದಲು ಅರ್ಹರೆಂಬ ಅಭಿಪ್ರಾಯಕ್ಕೆ ಬಂದು ಈ ಕೆಳಕಂಡಂತೆ ಮಾಡುವ

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1)ರಡಿ ದತ್ತಕವಾದ ಅಧಿಕಾರವನ್ನು ಬಳಸಿ, 1 ರಿಂದ 4ನೇ ಆರೋಪಿಯರ ವಿರುದ್ಧ ಮಾಡಲಾದ ಭಾರತ ದಂಡ ಸಂಹಿತೆ ಕಲಂ 498ಎ ಸಹವಾಚಕ ಕಲಂ 34 ಮತ್ತು ವರದಕ್ಷಿಣೆ ನಿಷ್ಷೇಧ ಕಾಯ್ದೆ ಕಲಂ 3 ಮತ್ತು 4ರ ಅಪರಾಧಗಳಿಂದ ಆರೋಪಿಯರನ್ನು ನಿರ್ದೋಷಿಗಳೆಂದು ಬಿಡುಗಡೆ ಮಾಡಿದೆ.

1 ರಿಂದ 4ನೇ ಆರೋಪಿಗಳು ನ್ಯಾಯಾಲಯಕ್ಕೆ ಬರೆದುಕೊಟ್ಟಿರುವ ಸ್ವಂತ ಹಾಗೂ ಜಾಮೀನುದಾರರ ಜಾಮೀನು ಮುಚ್ಚಳಿಕೆಗಳನ್ನು ರದ್ದುಪಡಿಸಲಾಗಿದೆ.

(ಮೇಲಿನ ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು, ಅವರಿಂದ ಗಣಕ ಯಂತ್ರ ದಲ್ಲಿ ಬೆರಳಚ್ಚು ಮಾಡಿಸಿ, ನನ್ನಿಂದ ತಿದ್ದುಪಡಿಮಾಡಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 12ನೇ ನವೆಂಬರ್ 2014ರಂದು ನನ್ನ ಸಹಿಯೊಂದಿಗೆ ಉದ್ಘೋಷಿಸಲಾಯಿತು.)

( ಎಂ.ಸಿ. ನಾಡಗೌಡ )
ಮಹಾನಗರ 2ನೇ ಅಪರ ಮುಖ್ಯ ದಂಡಾಧಿಕಾರಿ
ಬೆಂಗಳೂರು.

ಪರಿವಿಡಿ :

2. ಅಭಿಯೋಜನೆ ಪರ ವಿಚಾರಣೆಗೊಳಪಟ್ಟ ಸಾಕ್ಷಿಗಳ ಹೆಸರು :

ಅ.ಸಾ-1 ಕಲ್ಯಾಣಿ

ಅಭಿಯೋಜನೆಯ ಪರ ಗುರ್ತಿಸಲಾದ ನಿಶಾನೆಗಳು :-

ನಿಪಿ-1 ದೂರು

ನಿಪಿ-2 ಸ್ಥಳಮಹಜರು

ಅಭಿಯೋಜನೆಯ ಪರ ಗುರ್ತಿಸಿದ ಮುದ್ದೇಮಾಲುಗಳು :

ಇಲ್ಲ

ಆರೋಪಿಯರ ಪರ ವಿಚಾರಣೆಗೊಳಪಟ್ಟ ಸಾಕ್ಷಿಗಳ ಹೆಸರು :

ಇಲ್ಲ

ಆರೋಪಿಯರ ಪರ ಗುರ್ತಿಸಲಾದ ನಿಶಾನೆಗಳು :

ಇಲ್ಲ

( ಎಂ.ಸಿ. ನಾಡಗೌಡ )
ಮಹಾನಗರ 2ನೇ ಅಪರ ಮುಖ್ಯ ದಂಡಾಧಿಕಾರಿ

ಬೆಂಗಳೂರು.

ತೀರ್ಪನ್ನು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1)ರಡಿ ದತ್ತಕವಾದ ಅಧಿಕಾರವನ್ನು ಬಳಸಿ, 1 ರಿಂದ 4ನೇ ಆರೋಪಿಯರ ವಿರುದ್ಧ ಮಾಡಲಾದ ಭಾರತ ದಂಡ ಸಂಹಿತೆ ಕಲಂ 498ಎ ಸಹವಾಚಕ ಕಲಂ 34 ಮತ್ತು ವರದಕ್ಷಿಣೆ ನಿಷ್ಪೇಧ ಕಾಯ್ದೆ ಕಲಂ 3 ಮತ್ತು 4ರ ಅಪರಾಧಗಳಿಂದ ಆರೋಪಿಯರನ್ನು ನಿರ್ದೋಷಿಗಳೆಂದು ಬಿಡುಗಡೆ ಮಾಡಿದೆ.

1 ರಿಂದ 4ನೇ ಆರೋಪಿಗಳು ನ್ಯಾಯಾಲಯಕ್ಕೆ ಬರೆದುಕೊಟ್ಟಿರುವ ಸ್ವಂತ ಹಾಗೂ ಜಾಮೀನುದಾರರ ಜಾಮೀನು ಮುಚ್ಚಳಿಕೆಗಳನ್ನು ರದ್ದುಪಡಿಸಲಾಗಿದೆ.

ಪ್ರತ್ಯೇಕ ತೀರ್ಪು ಮಾಡಿದೆ.

ಮಹಾನಗರ 2ನೇ ಅಪರ ಮುಖ್ಯ ದಂಡಾಧಿಕಾರಿ